ಓ:ಎಸ್:ನಂ. *56/2018*

ಡಿ .ಡಬ್ಲ್ಯೂ- *1*

ದಿಃ *14-07-2022* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎಲ್ ವಕೀಲರಿಂದ

*1*ನೇ ಪ್ರತಿವಾದಿ ನನ್ನ ತಾಯಿ. *2*ನೇ ಪ್ರತಿವಾದಿ ನನ್ನ ಅಕ್ಕ. ನನ್ನ ತಾತನಾದ ವೆಂಕಟೇಗೌಡರಿಗೆ ಎನ್ ಆರ್ ಪುರ ತಾಲ್ಲೂಕಿನಲ್ಲಿ ತಮ್ಮ ಹೆಸರಿನಲ್ಲಿ ಜಮೀನುಗಳು ಮತ್ತು ಮನೆ ಇತ್ತು ಎಂದರೆ ಸರಿ. ಎನ್ ಆರ್ ಪುರ ತಾಲ್ಲೂಕಿನಲ್ಲಿ ಭದ್ರಾ ಡ್ಯಾಂ ಕಟ್ಟಿದ ನಂತರ ನಮ್ಮ ತಾತನಿಗೆ ಎಲ್ಲಾ ಆಸ್ತಿಗಳು ಮುಳುಗಡೆಯಾದ ಕಾರಣ ಕೆಂಚಿಕೊಪ್ಪ ಗ್ರಾಮದಲ್ಲಿ ಬಂದು ನೆಲೆಸಿರುತ್ತಾರೆಂದರೆ ಸರಿ. ಸರ್ಕಾರದವರು ಸದರಿ ವಿಚಾರವಾಗಿ ನಮ್ಮ ತಾತನವರಾದ ವೆಂಕಟೇಗೌಡರಿಗೆ ಸರ್ಕಾರದಿಂದ ಕೆಲವು ಆಸ್ತಿಗಳನ್ನು ಮಂಜೂರು ಮಾಡಿರುತ್ತಾರೆ. ದಾವ ಆಸ್ತಿಯು ಸಹ ಸರ್ಕಾರದಿಂದ ಮಂಜೂರಾದ ಆಸ್ತಿಗಳಲ್ಲಿ ಒಂದಾಗಿರುತ್ತದೆ ಎಂದರೆ ಸರಿ. ದಾವ ಆಸ್ತಿಯಲ್ಲಿ ನನ್ನ ತಾತನವರಾದ ವೆಂಕಟೇಗೌಡರವರು ಮನೆಯನ್ನು ಕಟ್ಟಿರುತ್ತಾರೆಂದರೆ ಸರಿ. ವಾದಿ ಮತ್ತು ನಮ್ಮ ತಂದೆ ತಮ್ಮ ಕುಟುಂಬದ ಆಸ್ತಿಗಳನ್ನು *1993-94*ನೇ ಸಾಲಿನಲ್ಲಿ ಒಟ್ಟು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಮತ್ತು ದಾವ ಆಸ್ತಿಯನ್ನು ಆ ವಿಭಾಗದಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ಕುಟುಂಬದ ಎಲ್ಲಾ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆಂದು ಸಾಕ್ಷ್ಯ ನುಡಿಯುತ್ತಾರೆ. ದಾವ ಆಸ್ತಿಯ ಖಾತೆಯಲ್ಲಿ ನನ್ನ ತಾತನವರಾದ ವೆಂಕಟೇಗೌಡರವರ ತಂದೆ ಹೆಸರು ತಪ್ಪಾಗಿ ನಮೂದಾದ ಕಾರಣ ದಾವ ಆಸ್ತಿಯನ್ನು ನಮ್ಮ ತಂದೆ ಮತ್ತು ಪ್ರತಿವಾದಿಗಳ ತಂದೆ ವಿಭಾಗ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಯ ಖಾತೆಯಲ್ಲಿ ನಮ್ಮ ತಾತನವರಾದ ಅವರ ತಂದೆಯ ಹೆಸರನ್ನು ಸರಿಪಡಿಸಿದ ನಂತರ ವಾದಿಯು ದಿನಾಂಕಃ *16-12-2017* ರಂದು ದಾವ ಸ್ವತ್ತಿನಲ್ಲಿ ತಮ್ಮ ಭಾಗವನ್ನು ಕೊಡುವಂತೆ ತಮಗೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ವಾದಿಯು ತಮ್ಮ ಭಾಗವನ್ನು ಕೊಡಬೇಕೆಂದು ನಮಗೆ ಕೇಳಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. *4*ನೇ ಪ್ರತಿವಾದಿಯು ಸಹ ನಮ್ಮ ತಾತನವರಾದ ವೆಂಕಟೇಗೌಡರ ಮಗಳು ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

**ಓ. ಕೇ. ಸ. ಇ. ಎ. ಒ.**

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**